Reg No. B G 155

20-6-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ತೆಲಂಗಾಣಾ ಚಳವಳಿಯಲ್ಲಿ ಮುಸ್ಲಿಂರ ಸೇರಡೆ

P R A Y E R

— Let us pray in tune with General Brooke —

God give us men, a time like this demands,
Great hearts, strong minds, true faith and willing hands,
Men whom lust of life does not kill
Men whom spirit of office cannot buy
Men who possess opinion and free will
Men who have honour, men who will not die.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಇವರೂ ಸತ್ಯಾಗ್ರಹಿಗಳು

ಹೈದರಾಬಾದು— ಮೊನ್ನೆ ತೆಲಂಗಾಣ ಚಳವಳಿಯಲ್ಲಿ 75 ವರ್ಷದ ಒಬ್ಬಾತನೂ, ಅವನ ಗರ್ಭಿಣಿ ಮಗಳೂ, ಇಬ್ಬರು ಸೊಸೆಯರೂ, ಮೊಮ್ಮಕ್ಕಳೂ ಎರಡು ಶಿಶುಗಳೂ ಭಾಗವಹಿಸಿದ್ದರು – ಅವರನ್ನೆಲ್ಲಾ ಪೋಲೀಸರು ವ್ಯಾನಲ್ಲಿ ಸಾಗಿಸಿದರು.

★

ತಪ್ಪಿಸೋಳಿಸಿ ಸೆಗಣಿ ಬಳಿದರು

ಕೊಚ್ಚಿ— ಎಫ್ ಎಸಿಟಿ ನೌಕರರ ಸಂಘವು ಅಧ್ಯಕ್ಷತೆಗೆ, ಸದಸ್ಯರ ಅಭಿಪ್ರಾಯಕ್ಕೆ ವಿರೋಧವಾಗಿ, ಸ್ಪರ್ಧಿಸಿ ಸೋತ ಜನಾರ್ದನ ಪಿಳ್ಳೈಯನ್ನು 200 ನೌಕರರು ಸುತ್ತುಗಟ್ಟಿ, ಅವನ ತಲೆಯನ್ನು ಬೋಳಿಸಿ ಸೆಗಣಿ ಬಳಿಸಿ, ಮೆರವಣಿಗೆ ಮಾಡಿ, ನಂತರ ತಲೆಯನ್ನು ತೊಳೆದು, ಮನೆಗೆ ಕಳಿಸಿದರು – ಪೋಲೀಸರು ಕೇಸ್ ರಿಜಿಸ್ಟರು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

● ▪ ▬ ▬ ▬

ವಿಶ್ವವಿದ್ಯಾಲಯಗಳಿಗೆ ಗ್ರಾಂಟು

ನವದೆಹಲಿ— ದೇಶದ ಜನಸಂಖ್ಯೆ ಸಮಸ್ಯೆಯ ವಿಷಯ ಚರ್ಚೆ ನಡೆಸಲು ಭಾರತದ 63 ವಿಶ್ವವಿದ್ಯಾಲಯಗಳಿಗೆ ಸರಕಾರ ಗ್ರಾಂಟುಗಳನ್ನು ಮಂಜೂರ್ಮಾಡಿದೆ.

★

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಿತಾಂಶ ಪ್ರಕಟನೆ

ತಾ|| 22 ಬೆಳಿಗ್ಗೆ 6 ಗಂಟೆಗೆ ಪ್ರಥಮ ಮತ್ತು ಕಡೇ ಬಿ.ಕಾಂ., ಮತ್ತು ಬಿ. ಇಡಿ ಪರೀಕ್ಷೆಯ, ತಾ|| 24 ಬೆಳಿಗ್ಗೆ 6 ಗಂಟೆಗೆ ಪ್ರಥಮ ಬಿ.ಎ. ಮತ್ತು ಬಿ. ಎಸ್ಸಿ. ಪರೀಕ್ಷೆಯ, ತಾ || 25 ಬೆಳಿಗ್ಗೆ 6 ಗಂಟೆಗೆ ಕಡೇ ಬಿ. ಎ. ಮತ್ತು ಬಿ. ಎಸ್ಸಿ. ಪರೀಕ್ಷೆಯ ಫಲಿತಾಂಶ ಪ್ರಕಲಿಸಲಾಗುತ್ತೆ.

★

ನಾಟಕ ನಡೆಯಿತು

ತುಮಕೂರು— ಗಂಗಾಸಂದ್ರ ಗ್ರಾಮದಲ್ಲಿ ನಡೆಸಲೇರ್ಪಡಿಸಿದ್ದ ನಾಟಕ ನಡೆಯಿತು – ಏನೂ ಘಟನೆಗಳಾಗಲಿಲ್ಲ – ಪ್ರತಿಬಂಧಕಾಜ್ಞೆ ಉಲ್ಲಂಘಿಸಿದ ಆಪಾದನೆಗೆ 38 ಮಂದಿ ದಸ್ತಗಿರಿ ಮಾಡಲ್ಪಟ್ಟರು ಅನೇಕ ಕಡೆಗಳಿಂದ ನಾಟಕಕ್ಕೆ 2000 ಮಂದಿ ಬಂದಿದ್ದರು.

★

ಕೇಂದ್ರ – ರಾಜ್ಯಗಳು

ನವದೆಹಲಿ— ಕೇಂದ್ರವು ರಾಜ್ಯಗಳಲ್ಲಿ ಸಶಸ್ತ್ರ ಪಡೆಗಳನ್ನು ಉಪಯೋಗಿಸಬಹುದೆಂದು ಆಡಳಿತ ಸುಧಾರಣಾ ಆಯೋಗವು ಶಿಫಾರಸು ಮಾಡಿದೆ.

★

ಮಹಾ ಕುಂಭಾಭಿಷೇಕ

ತಿರುಪತಿ— ತಿರುತಣ್ಣಿಯಲ್ಲಿ ನಿನ್ನೆಯಿಂದ ಬುಧವಾರದವರೆಗೆ ನಡೆಯುವ ಮಹಾಕುಂಭಾಭಿಷೇಕ ಮಹೋತ್ಸವಕ್ಕೆ 2 ಲಕ್ಷ ಯಾತ್ರಿಕರು ಬರುವ ನಿರೀಕ್ಷೆಯಿದ್ದೆ.

★

ಹಣ-ದುರುಪಯೋಕ್ಕೆ ಶಿಕ್ಷೆ

ಮಡಕೇರಿ— ಮಾರ್ನಾಡಿನಲ್ಲಿ ಮಾಜಿ ಪೋಸ್ಟ್‌ಮಾಸ್ಟರಾಗಿದ್ದ ಮ್ಯಾಸೀಫ್ ಮ್ಯಾಜಿಸ್ಟ್ರೇಟು ಶ್ರೀ ಪಾಡ್ಯಾಸರಿಗೆ ರೂ. 1000 ದುರುಪಯೋಗಪಡಿಸಿಕೊಂಡ ಆಪಾದನೆಗೆ 6 ತಿಂಗಳು ಕಠಿಣ ಸಜೆ ವಿಧಿಸಲಾಯಿತು.

ತೆಲಂಗಾಣಾ ಚಳವಳಿ

ಹೈದರಾಬಾದು— ಸಾಮೂಹಿಕ ಸತ್ಯಾಗ್ರಹ ಸ್ಯಾರಂಭವಾಯಿತು – ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಲು ಅನೇಕರು ಭಾಗವಹಿಸಿದರು – ಸದಾಶಿವಪೇಟೆಯ ಪುರಸಭಾಧ್ಯಕ್ಷರು ಮತ್ತು ಅನೇಕ ಕೌನ್ಸಿಲರುಗಳೂ ಸೇರಿ 500 ಮಂದಿ ಪೋಲೀಸು ಸ್ಟೇಷನ್ನಿಗೆ ಮೆರವಣಿಗೆಯಲ್ಲಿ ಹೋದರು; ಪೋಲೀಸರು ಕೆಲವರನ್ನು ದಸ್ತಗಿರಿ ಮಾಡಿದರು – ಜೋಗಿಪೇಟೆಯಲ್ಲಿ 500 ಮಂದಿ ಸತ್ಯಾಗ್ರಹ ನಡೆಸಿದರು; ಕೆಲವರು ದಸ್ತಗಿರಿ ಮಾಡಲ್ಪಟ್ಟು ಅನಂತರ ಬಿಡುಗಡೆ ಮಾಡಲ್ಪಟ್ಟರು – ಮುಖ್ಯ ಮಂತ್ರಿ ಶ್ರೀ ಬ್ರಹ್ಮಾನಂದರೆಡ್ಡಿಯವರನ್ನು ಪ್ರಜಾ ಮಾಡಬೇಕೆಂದು 11 ಮಹಿಳಾ ಕಮ್ಯೂನಿಸ್ಟರು ಸರ್ಕಾರಿ ಕಚೇರಿ ಮುಂದೆ ಘೋಷಣೆ ಮಾಡಿದರು – ನಿನ್ನೆ ಹೆಚ್ಚು ಮುಸ್ಲಿಂರು ಭಾಗವಹಿಸಿದರು ; 18 ಮಂದಿ ಮುಸ್ಲಿಂರು ದಸ್ತಗಿರಿ ಮಾಡಲ್ಪಟ್ಟರು – ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿರುವ ಹಯಾತ್‌ನಗರದ 24 ಗ್ರಾಮಪಂಚಾಯಿತಿಗಳ ಸರಪಂಚರು ತಾ || 24 ರಂದು 1000 ಮುಸ್ಲಿಂರ ತಂಡದ ಸತ್ಯಾಗ್ರಹದ ಮುಂದಾಳತ್ವ ವಹಿಸುವರು.

★

ರಾಂ ರಹೀಂ ಜಸ್ನಾ, ತೆಲಂಗಾಣ ಅಸ್ನ

ಹೈದರಾಬಾದು— ಪ್ರತ್ಯೇಕ ತೆಲಂಗಾಣಾ ಚಳವಳಿಯಲ್ಲಿ ಮುಸ್ಲಿಂರೂ ಭಾಗವಹಿಸಲು ಪ್ರಾರಂಭಿಸಿರುವುದರಿಂದ, ಅದರ ಘೋಷಣೆಯು 'ರಾಂ ರಹೀಂ ಜಪ್ನಾ ತೆಲಂಗಾಣ ಅಪ್ನ" ಎಂದು ಮಾರ್ಪಡಿಸಲಾಗಿದೆ.

★

ಮರೆಯಾಗುತ್ತಿರುವ ಮಂತ್ರಿಗಳು

ಮದರಾಸು— ತಮಿಳುನಾಡು ಕಾಲೇಜುಗಳಲ್ಲಿ ಪ್ರವೇಶ ಸಿಕ್ಕಲು ಸಹಾಯಕ್ಕಾಗಿ ಬರುತ್ತಿರುವವರಿಗೆ ಸಿಕ್ಕದಂತೆ ಅನೇಕ ಮಂತ್ರಿಗಳು ಮರೆಯಾಗುತ್ತಿರುವರು – ಅವರು ಆಫೀಸಿನಲ್ಲಾಗಲೀ ಮನೆಯಲ್ಲಾಗಲೀ ಸಿಕ್ಕುತ್ತಿಲ್ಲ.

ಪುರುಷಸೂಕ್ತ

ಸಂಗ್ರಾಹಕರು :
ಆ. ನ. ಅಯ್ಯಂಗಾರ್

[ಮುಂದುವರಿದುದು]

ಆ ಭಗವತ್ಸಂಕಲ್ಪದ ದೆಸೆಯಿಂದ, ಮಹದಾದಿ ರೂಪದಿಂದ ಬಹುವಿಧವಾಗಿ ವಿರಾಜಿಸುವಪ್ರಕೃತಿಯು. ಮಹದಾದ್ಯಂಡಪರ್ಯಂತ ರೂಪದಿಂದ ಪರಿಣಮಿಸಿತು. ಅಂಡಪರ್ಯಂತವಾದ ಪ್ರಕೃತಿ ಮಂಡಲದ ಅನಂತರ ಚತುರ್ಮುಖನು ಉತ್ಪನ್ನನಾದನು. ನಂತರ ಪ್ರವೃದ್ಧಕಾಯನಾದನು. ಈ ರೀತಿ ಸಮಸ್ತ ಅವಯವಗಳನ್ನು ಹೊಂದಿದ ಚತುರ್ಮುಖನು ಪ್ರಪಂಚವನ್ನು ಸೃಷ್ಟಿಸುವ ಸಲುವಾಗಿ, ಪರಮಾತ್ಮನ ಅನುಗ್ರಹವನ್ನು ಹೊಂದಲು, ಆತ್ಮಸಮರ್ಪಣರೂಪ ಮಾನಸಯಾಗದಿಂದ ಆರಾಧಿಸಿದನು. ಈ ರೀತಿ ಚತುರ್ಮುಖಾತ್ಮಕವಾದ ಹವಿಸ್ಸಿನಿಂದ ಅವನ ಇಂದ್ರಿಯಗಳು ಧ್ಯಾನರೂಪವಾದ ಮಾನಸಯಜ್ಞವನ್ನು ಮಾಡಲು, ವಸಂತಕಾಲವೇ ತುಪ್ಪವೆಂದು ಧ್ಯಾನಿಸಲ್ಪಟ್ಟಿತು. ಗ್ರೀಷ್ಮಕಾಲವು ಸಮಿತ್ತಾಗಿ ಎಣಿಸಲ್ಪಟ್ಟಿತು. ಶರತ್ಕಾಲವು ಪುರೋಡಾಶವೆಂಬ ಹವಿಸ್ಸಾಗಿ ಧ್ಯಾನಿಸಲ್ಪಟ್ಟಿತು.

ಈ ಯಜ್ಞಕ್ಕೆ ಪೃಥಿವೀ, ಅಪ್, ತೇಜಃ, ವಾಯು, ಆಕಾಶ, ಅಹಂಕಾರ, ಬುದ್ಧಿ ಎಂಬ ಏಳು ತತ್ವಗಳೂ ಏಳು ಪರಿಧಿಗಳಾಗಿ ಧ್ಯಾನಿಸಲ್ಪಟ್ಟವು (ಪರಿಧಿ ಎಂದರೆ ಅಗ್ನಿಯ ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳಲ್ಲಿ ಇಡಲ್ಪಡುವ ಉದ್ದವಾದ ಸಮಿತ್ತುಗಳು). ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯ, ಮನಸ್ಸು, ಐದು ತನ್ಮಾತ್ರಗಳು, ಐದು ಭೂತಗಳು, ಈ ಇಪ್ಪತ್ತೊಂದೂ ಸಮಿತ್ತುಗಳಾದವು. ಈ ರೀತಿ ಯಜ್ಞವನ್ನು ಆರಂಭಿಸಿದ ಚತುರ್ಮುಖನ ಇಂದ್ರಿಯಗಳು ಚತುರ್ಮುಖನೆಂಬ ಯಜ್ಞಪಶುವನ್ನು ಹೃದಯವೆಂಬ ಯೂಪಸ್ತಂಭಕ್ಕೆ ಬುದ್ಧಿ ಎಂಬ ಹಗ್ಗದಿಂದ ಕಟ್ಟಿದರು. (ಅನನ್ಯಗತಿಯನ್ನಾಗಿ ಮಾಡಿದರು ಎಂದು ಭಾವ).

ಗಾಂಧೀಜೀ ಅಮೃತವಾಣಿ

ಕಷ್ಟಕಾಲದಲ್ಲೇ ನಿಜವಾದ ಮಿತ್ರತ್ವ ಪರೀಕ್ಷೆಯಾಗುತ್ತದೆ.

ಆಶೋಕ ಏಜೆನ್ಸೀಸ್

ಲಕ್ಷ್ಮಿಡಾರ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ನಿಮ್ನ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ



Protect the Cow

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಜಯಪ್ರದ 5 ನೇ ವಾರ

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ
.... ನೋಡಲು ತಪ್ಪಬೇಡಿ ....

ದು ನಿ ಯಾ Duniya

ಪಾತ್ರ– ದೇವಾನಂದ್, ವೈಜಯಂತಿಮಾಲಾ, ಜಾನಿವಾಕರ್, ಬಾಲರಾಜ್ ಸಹಾನಿ

ತಾ|| 23-5-69 ರಿಂದ ಪ್ರವೇಶದರಗಳನ್ನು ಕೆಳಗೆನಮೂದಿಸಿರುವಂತೆ ಬದಲಾಯಿಸಿದೆ
ಬಾಕ್ಸ್ ರೂ 2–90, ಬಾಲ್ಕನಿ ರೂ 2–05, ಕೆಳಗಡೆ ರೂ 1–20, 0–75

[ದಿನ 3 ಪ್ರದರ್ಶನಗಳು]

ಆಪೆರಾ— ಅನೋಖ 2 ನೇ ವಾರ

.... ಮನಮೋಹಕ ತಮಿಳು ಚಿತ್ರ ....

ಕುಳಂದೆ ಉಳ್ಳಂ

ತಾರಾಗಣ— ಜೆಮಿನಿ ಗಣೇಶ್, ಮನೋಹರ್, ರಂಗರಾವ್, ವಿ ಕೆ ರಾಮಸ್ವಾಮಿ
ಜೆಮಿನಿ ಬಾಲು, ಸಾಹುಕಾರ್ ಜಾನಕಿ, ವಾಣಿಶ್ರೀ, ಬೇಬಿ ರೋಜಾಮಣಿ, ಸಾವಿತ್ರಿ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri. Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited Printed & Published by Dharmaprachara Nirata M. S. Krishna Rao (Proprietor) at the Satyavadi Press Chamarajapuram, Mysore 4